

ದುರ್ಗಾಂಬಿಕಾ ಜಾತ್ರೆಯ ವೈಭವ

ಅತ್ಯಂತ ಗಾಢವಾದ, ಧಾರಣಾ ಶಕ್ತಿ ಇರುವಂಥದ್ದು. ಅದು ಊರಿನ ಬಗೆಗೆ ಇರುವ ಯಾವುದೋ ಭಾವುಕತೆಯ ಕಾರಣಕ್ಕೆ ಅಲ್ಲ. ಬದಲಿಗೆ ಊರಿಗೆ ಇರುವ ಕಾಲಾತೀತ ಔಚಿತ್ಯಕ್ಕೆ. ಊರಿನ ಚಹರೆ ಬದಲಾಗಬಹುದು, ಬೆಳೆಯುತ್ತಿರುವ ಬೆಳೆಗಳು ಬದಲಾಗಬಹುದು, ಜನರಸ್ವಗುಣಗಳು ಹೊಸತಾಗಬಹುದು. ಆದರೆ ಯಾವುದೇ ಊರಿಗೆ ಇರುವ ಭೌಗೋಳಿಕ ಅಸ್ತಿತ್ವ ಅದನ್ನು ಎಂದೆಂದೂ ಬೇರು ಸರಿಯದಂತೆ ಕ್ಯಾಲಿಬ್ರೇಟ್ ಮಾಡುತ್ತಲೇ ಇರುತ್ತದೆ.

ಈ ನಮ್ಮ ದಾವಣಗೆರೆ ಅಂಥದೊಂದು ಊರು. ಪ್ರತೀ ಬಾರಿ ಹೋದಾಗಲೂ ಊರು ಇನ್ನಷ್ಟು ಕಿಕ್ಕಿರಿದ ಹಾಗೆ ಕಾಣಿಸುತ್ತದೆ. ಮತ್ತಷ್ಟು ಕಿಕ್ಕಿರಿದರೆ ಊರಿಗೆ ಉಸಿರು ಕಟ್ಟಿಯೇ ಬಿಡುತ್ತದನೋ ಎನ್ನಿಸುವಾಗಲೂ ಆ ಊರು ಮತ್ತೊಂದು ಬೃಹತ್ ಬಿಲ್ಡಿಂಗನ್ನೋ, ನಾಲ್ಕು ಮಹಡಿಗಳ ದೊಡ್ಡ ಕಾಲೇಜನ್ನೋ, ನೂರಾರು ಎಕರೆಗಳ ಫ್ಯಾಕ್ಟರಿಯನ್ನೋ ತನ್ನ ತೆಕ್ಕೆಯೊಳಗೆ ತೆಗೆದುಕೊಂಡು ಧುಸುಮುಸು ಮಾಡುತ್ತಾ ಸಾಗುತ್ತಿರುತ್ತದೆ. 'ಜಲ್ ಜಲ್ದಿ ಹೆಜ್ಜಿ ಹಾಕು' ಅಂತ ಊರು ನಮಗೆ ಹೇಳಿದ್ದು ಕೇಳಿಸಿತಾ?

ಕನ್ನಡ ನೆಲದ ನಟ್ಟ ನಡುವೆ, ಹಳೆಯ ಕಾಲದ ಎರಡನೇ ಮಗನಂತೆ ಇರುವ ಈ ಊರಿಗೆ ಕಿರಿ ಮಗನಿಗೆ ದಕ್ಕುವ ಪ್ರೀತಿಯ ಸೆಲೆಯಿಲ್ಲ, ಹಿರಿ ಮಗನಿಗೆ ಸಿಗುವ ಪ್ರಶ್ನಾತೀತ ಗೌರವ ಜವಾಬ್ದಾರಿಗಳೂ ಇಲ್ಲ. 'ದಾರಿಯಾಗಳ ಹ್ವಲ ಆಗಬಾರ್ದು, ಮನಿಗೆ ಹಿರಿ ಮಗ ಆಗಬಾರ್ದು' ಅಂತ ಇಲ್ಲಿನ ಒಂದು ನಾಣ್ನುಡಿ.

ಅಷ್ಟೇನಾ ಹಂಗಾರೆ?

ಇನ್ನೂ ಐತಿ ತಡೀರಿ. ಅತ್ತಾಗ ಮಲೆನಾಡಿನ ಹಸಿರು ಇಲ್ಲ. ಬೆಟ್ಟಗುಡ್ಡ, ಸೌಂದರ್ಯ, ಪ್ರಕೃತಿ, ಕನ್ನಡಿಯಂತಹ ಕೆರೆಗಳು, ಹೂವುಗಳು, ಜಲಪಾತಗಳು, ಸಮುದ್ರ – ಊಹೂಂ. ಇವೆಲ್ಲವೂ ಇದ್ದರೂ ಇವ್ಯಾವುದೂ ತೀರಾ ಹೆಚ್ಚು ಅನ್ನಿಸುವಷ್ಟಿಲ್ಲ. ಸಂಸ್ಕೃತಿಯ ವಿಷಯಕ್ಕೆ ದಾವಣಗೆರೆ ಕೇವಲ ವಾಣಿಜ್ಯ ಸಂಸ್ಕೃತಿಯ ಊರು. ಅಂದರೆ ಊರಿಂದಾ ಆಆಆಆಸಿ ಪೂನಾ ಬೆಂಗಳೂರು ಹೆದ್ದಾರಿ ಹಾದು ಹೋಗುವ ಪ್ರಯುಕ್ತ, ಇದಕ್ಕೆ ದಲ್ಲಾಲಿಗಳ ಊರು ಅಂತ ಹೆಸರಿದೆ. ಹಳೇ ಕಾಲದಲ್ಲಿ ಹತ್ತಿ, ಭತ್ತ, ಮುಸುಕಿನ ಜೋಳ, ಹೀಗೆ ಹತ್ತು ಹಲವಾರು ಕಾಳುಗಳನ್ನೂ, ಇತ್ತೀಚಿನ ದಶಕಗಳಲ್ಲಿ ಎಂಜಿನಿಯರಿಂಗು, ಮೆಡಿಕಲ್ಲು, ಡೆಂಟಲ್ಲು, ನರ್ಸಿಂಗು, ಎಂಬಿಎ ಮತ್ತೊಂದು ಮಗದೊಂದು ಹೀಗೆ ಸಾವಿರ ನಮೂನೆಯ ಸೀಟುಗಳನ್ನೂ ದಿನ ಬೆಳಗಾದರೆ ಬಿಕರಿ ಮಾಡುತ್ತಾ ಸುಸ್ತೇ ಆಗದಂತೆ ಸಾಗುತ್ತದೆ.

'ಮುಂಜ್ ಮುಂಜೆಲೆ ಎದ್ದು ಮಕ ತ್ವಕ್ಕಣದಂಗ ಎಲ್ಲಿಗ್ ಹೊಗಿದ್ದಿ ಊರ್ ಸುತ್ತ ಮಂಗ್ಯಾನಂತನೆ?' ಎಂದು ಬೆಳಗಾ ಮುಂಜೇಲೆ ಎದ್ದ ಅಪ್ಪ ಮಗನಿಗೆ ಬೈಯ್ಯುವುದು ಕೇಳಿದ ಬೆನ್ನಲ್ಲೇ 'ಅವುನ್ ಏನ್ ಬೈತಿ ನಿನಿಗ್ ಮಾಡಕ್ ಕೆಲಸಿಲ್ಲ, ಅದಕ್ಕ ದೇವ್ ಎದ್ದಂಗ ಎದ್ ಕುಂದ್ರತೀ ಎಷ್ಟೆಷ್ಟೂ ಸಾಮಾಧಾನಿಲ್ಲ ನಿನಿಗೆ. ಎಷ್ಟರ ಉರುಸ್ತೀಯಪ ನೀನು' ಎಂದು ಮತ್ತಷ್ಟು ನಿದ್ದೆ ಮಾಡಬೇಕೆಂದಿದ್ದ ಹೆಂಡತಿ ಗಂಡನಿಗೆ ಕ್ಲಾಸ್ ತೆಗೆಯುವುದನ್ನೂ ನೋಡಬಹುದು. ಇದೇನು ತಿಳಿದಂತೆ ಮಾತೃ ಪ್ರಧಾನ ಸಮಾಜವಲ್ಲ. ಆದರೆ ಕುಟುಂಬಗಳ ಒಳಗೇ ಮದುವೆ ಆಗುತ್ತಾ ಸಾಗಿದ್ದರಿಂದ ಇಲ್ಲಿನ ಹೆಣ್ಣು ಮಕ್ಕಳು ಧಾಡಸಿ ಸ್ವಭಾವದವರು. ಕವಿಗಳ ಕಲ್ಪನೆಯ, ಕಾಳಿದಾಸನ ವರ್ಣನೆಯ ಸಿಂಹಕಟಿ, ದಾಳಿಂಬೆ ದಂತ ಪಂಕ್ತಿಯ ಹೆಣ್ಣುಮಕ್ಕಳು ಇವರಲ್ಲ. ಸೊಂಟದ ಮ್ಯಾಲೆ ಕೈ ಹೇರಿ ಭುಜಕ್ಕೆ ಭುಜ ನಿಲ್ಲಿಸಿ ತಮ್ಮ ಸ್ಥಾನ ಗಟ್ಟಿ ಮಾಡಿಕೊಳ್ಳುವವರು ಇವರು.

ಹಿಂದೊಮ್ಮೆ ಒಂದು ವಿಡಿಯೊ ವೈರಲ್ ಆಗಿತ್ತು. ಯಾರೋ ಟ್ರಾಫಿಕ್ ಇನ್ಸ್‌ಪೆಕ್ಟರು ಮತ್ತು ಕಾನ್ಸ್‌ಟೇಬಲು ದಾರಿ ಅಡ್ಡಕ್ಕೆ ನಿಂತು ಲೈಸೆನ್ಸ್ ಚೆಕ್ ಮಾಡುತ್ತಿದ್ದರು. ಆವತ್ತು ಅವರ ಅಡ್ಡ ಹಾಕಿ ನಿಲ್ಲಿಸಿಕೊಂಡಿದ್ದ ಹುಡುಗಿ ಲೈಸೆನ್ಸ್ ತಂದಿರಲಿಲ್ಲ. ಎಲ್ಲಿಂದ ಎಲ್ಲಿಗೂ ಇಪ್ಪತ್ತು ನಿಮಿಷದಲ್ಲಿ ಓಡಾಡುವ ದಾರಿಗಳಲ್ಲಿ ದಾಖಲೆ ಇಟ್ಟುಕೊಂಡು ಓಡಾಡುವವರು ಕಡಿಮೆ.

'ಲೈಸನ್ಸ್ ತಗಿಯಮ' ಕಾನ್ಸ್‌ಟೇಬಲ್ ಕೇಳಿದ.

'ಮನಿಯಾಗ್ ಐತಿ. ತಂದು ತೋರುಸ್ತನಿ'

'ಆತು. ಗಾಡಿ ಇಲ್ಲೇ ಬಿಟ್ ಹೋಗು'

'ಗಾಡಿ ಬಿಟ್ ಮನಿಗೆ ಹೊಗದು ಹೆಂಗ್ರಿ? ನೀವು ಇಲ್ಲೇ ನಿಂದರ್ರಿ. ನಾನು ಹತ್ ನಿಮ್ಷದಾಗ್ ತಂದು ತೋರುಸ್ತನಿ' ಅವಳ ಚೌಕಾಸಿ.

'ಹಂಗೆಲ್ಲಾ ಆಗಂಗಿಲ್ಲ. ನೀ ಬರ್ತೀ ಅಂತ ಗ್ಯಾರಂಟಿ ಏನು? ಗಾಡಿ ಇಲ್ಲೇ ಬಿಟ್ಟು ತಂದ್ ತೋರ್ಸು'

'ಗಾಡಿ ಬಿಟ್ ಹೋದಾಗ್ ನೀವು ಯತ್ತಗರ ಹೋದ್ರೆ ನಂ ಗಾಡಿ ಏನಾಬಕು? ನೀವೇ ಇಲ್ಲಿರ್ರಿ, ತರ್ತನಿ'

'ಆಗಲ್ಲಮ. ಜಾಸ್ತಿ ಮಾತ್ ಬ್ಯಾಡ, ತಂದ್ ತೋರ್ಸು'

'ಹಂಗೆಂಗಾಕ್ಕತಿ? ಎಲ್ಲಾ ಟೈಮಿನ್ಯಾಗ ಇದನ್ನೆಲ್ಲಾ ಇಟಕಂಡು ಓಡಾಡಕ ಆಗಲ್ಲ. ನೀವೇನು ಯಾವಾಗ್ಲೂ ಇಟಕಂಡಿರ್ತೀರ? ನಿಮ್ ಲೈಸೆನ್ಸ್ ತೋರುಸ್ರಿ ನೋಡನ?'

ಇದನ್ನು ಗಮನಿಸಿದ ಇನ್ಸ್‌ಪೆಕ್ಟರು ತಮ್ಮ ಸಹೋದ್ಯೋಗಿಗೆ ಹೇಳಿದರು. 'ತೋರ್ಸಪ ಹೋಲಿ. ನೋಡ್ಕ್ಯಳಮ' ಎಂದು ಉಳಿದವರನ್ನು ಚೆಕ್ ಮಾಡುವುದರಲ್ಲಿ ನಿರತರಾದರು.

ತಾನೂ ಲೈಸೆನ್ಸ್ ತಂದಿಲ್ಲ ಎಂದು ಕಾನ್ಸ್‌ಟೇಬಲು ಹೇಳಲಾರ, ಬಿಡಲಾರ. ಅವರಿಬ್ಬರ ಹಾಕ್ಯಾಟ

ಕಳೆದ ವಾರದ 'ಚೆನ್ನುಡಿ'
'ನೀವು ಮಂಗ್ಳೂರವರಾ...'
ಕೇಳಿ ಕನ್ಸೆಪ್ಟಾ ಫೆರ್ನಾಂಡಿಸ್ ಅವರ ಧ್ವನಿಯಲ್ಲಿ

ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

